**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. ನಂ. 1801/2024**

**ಸಿ.ಡಬ್ಲ್ಯೂಃ 1 ಪಿ.ಡಬ್ಲ್ಯೂಃ 4**

ಸಾಕ್ಷಿದಾರನ ಹೆಸರು : ಶ್ರೀಧರ ನಿಡೋಣಿ

ತಂದೆಯ ಹೆಸರು : ಅಶೋಕ

ವಯಸ್ಸು : 31 ವರ್ಷ

ಕೆಲಸ : ಅಬಕಾರಿ ನಿರೀಕ್ಷಕರು, ಆಳಂದ

ವಾಸ : ಆಳಂದ

**ಸಾಕ್ಷಿಯ ವಿಚಾರಣೆಯನ್ನು ವೀಡಿಯೋ ಕಾನ್ಫರೆನ್ಸ ಮೂಲಕ ಪಡೆದುಕೊಳ್ಳಲಾಯಿತು.**

**ಸಾಕ್ಷಿಗೆ ದಿನಾಂಕಃ 23.06.2026 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ**

1. ನಾನು ಪೇಬ್ರುವರಿ 2024 ರಿಂದ ಜೂನ್ 2024 ರವರೆಗೆ ನಾನು ಸಿರುಗುಪ್ಪ ವಲಯದಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೆನೆ.

2. ನಾನು ದಿಃ 19.04.2024 ರಂದು ನಾನು ಚಾಸಾ 4 ರವರನ್ನು ರಸ್ತೆ ಗಾವಲು ಮಾಡುತ್ತಿದ್ದೆನು. ಆಗ ನಮಗೆ ತೆಕ್ಕಲಕೋಟೆಯಿಂದ ಉಪ್ಪಾರಹೊಸಳ್ಳಿ ಅಕ್ರಮವಾಗಿ ಮದ್ಯ ಸಾಗಾಟ ಆಗುತ್ತಿದೆ ಎಂದು ಮಾಹಿತಿ ಬಂತು. ನಾನು ಚಾಸಾ 7 ಮತ್ತು 3 ರವರನ್ನು ಪಂಚರಾಗಿ ಬರಮಾಡಿಕೊಂಡೆನು. ನಾವು ತೆಕ್ಕಲಕೋಟೆಯಿಂದ ಉಪ್ಪಾರಹೊಸಳ್ಳಿ ರಸ್ತೆಯಲ್ಲಿ ಒಂದು ನೀರಿನ ಟ್ಯಾಂಕ್ ಬಳಿ ಹೋಗುತ್ತಿದ್ದಾಗ ಬೆಃ 11.00 ಗಂಟೆಗೆ ಒಬ್ಬ ವ್ಯಕ್ತಿ ಟಿ ವಿ ಎಸ್ ಎಕ್ಸ ಎಲ್ ವಾಹನದಲ್ಲಿ ಒಂದು ಬಿಳಿ ಪ್ಲಾಸ್ಟಿಕ್ ಚೀಲದಲ್ಲಿ ಏನನ್ನೋ ಇಟ್ಟುಕೊಂಡು ಹೋಗುತ್ತಿದ್ದನು. ಆತನನ್ನು ತಡೆದು ಸ್ಥಳದಲ್ಲಿ ನಾನು ಶೋಧನಾ ಸಮುಚಿತ ವಾರಂಟ್ ತಯಾರಿಸಿ ಚೀಲವನ್ನು

ಪರಿಶೀಲಿಸಿದಾಗ ಸದರಿ ಚೀಲದಲ್ಲಿ 90 ಎಂ ಎಲ್ ನ ಒರಿಜಿನಲ್ ಚಾಯ್ಸ ವಿಸ್ಕಿಯ 45 ಪ್ಯಾಕೇಟ್ ಮತ್ತು 90 ಎಂ ಎಲ್ ನ ಹೈ ವರ್ಡ್ಸ್ ವಿಸ್ಕಿಯ 30 ಪ್ಯಾಕೇಟ್ ಗಳು ಇದ್ದವು. ಮದ್ಯ ಸಾಗಾಟ ಮಾಡಲು ಆತನ ಬಳಿ ಯಾವುದೇ ಪರವಾನಿಗೆ ಇರಲಿಲ್ಲ. ರಾಸಾಯನಿಕ ಪರೀಕ್ಷೆಗಾಗಿ ಒರಿಜಿನಲ್ ಚಾಯ್ಸ ನ 16 ಪ್ಯಾಕೇಟ್ ಹಾಗೂ ಹೈ ವರ್ಡ್ಸ್ ವಿಸ್ಕಿಯ 10 ಪ್ಯಾಕೇಟ್ ಗಳನ್ನು ಒಂದು ಬಿಳಿ ಚೀಲದ್ಲಲಿ ಹಾಕಿ ಸೀಲ್ ಮಾಡಿದೆನು. ವಾಹದ ಸಂಖ್ಯೆ ಕೆ ಎ 34 ಇಕ್ಯೂ 8607 ಎಂದು ಇತ್ತು. ಸ್ಥಳದಲ್ಲಿ ಪಂಚನಾಮೆಯನ್ನು 11.00 ರಿಂದ 12.00 ರವರೆಗೆ ಮಾಡಿದೆನು. ಸದರಿ ಪಂಚನಾಮೆಗೆ ನನ್ನ, ಪಂಚರ ಹಾಗೂ ಸಿಬ್ಬಂದಿಗಳ ಸಹಿ ಪಡೆದೆನು. ಆರೋಪಿಗೆ ನೋಟಿಸ್ ಕೊಟ್ಟು ತನಿಖೆಗೆ ಹಾಜರಾಗಲು ಸೂಚಿಸಿದೆನು.

3. ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದರಿಂದ ಸದರಿ ಪಂಚನಾಮೆಯನ್ನು ನಿಪಿಃ 1 ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿಃ 1(ಡಿ) ಎಂದು ಗುರುತಿಸಲಾಯಿತು. ಮಾದರಿ ಶೀಲಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿಃ 2 ಎಂದು ಹಾಗೂ ಸದರಿ ಸಹಿಯನ್ನು ನಿಪಿಃ 2(ಎ) ಎಂದು ಗುರುತಿಸಲಾಯಿತು. ನಂತರ ಕಚೇರಿಗೆ ಬಂದು ದೂರು ದಾಖಲು ಮಾಡಿದೆನು. ಸಾಕ್ಷಿ ದೂರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿಃ 3 ಎಂದು ಹಾಗೂ ಸದರಿ ಸಹಿಯನ್ನು ನಿಪಿಃ 3(ಎ) ಎಂದು ಗುರುತಿಸಲಾಯಿತು. ನಂತರ ಪ್ರ ವ ವ ನ್ನು ತಯಾರಿಸಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆನು. ಸಾಕ್ಷಿ ಪ್ರ ವ ವದಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿಃ 4 ಎಂದು ಹಾಗೂ ಸದರಿ

ಸಹಿಯನ್ನು ನಿಪಿಃ 4(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಶೋಧನಾ ಸಮುಚ್ಚಿತ ವಾರಂಟ್ ನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿಃ 5 ಎಂದು ಹಾಗೂ ಸದರಿ ಸಹಿಯನ್ನು ನಿಪಿಃ 5(ಎ) ಎಂದು ಗುರುತಿಸಲಾಯಿತು. ಆರೋಪಿಗೆ ನೀಡಿದ ನೋಟಿಸ್ ನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿಃ 6 ಎಂದು ಹಾಗೂ ಸದರಿ ಸಹಿಯನ್ನು ನಿಪಿಃ 6(ಎ) ಎಂದು ಗುರುತಿಸಲಾಯಿತು. ಮುಂದಿ1 ನ ತನಿಖೆಯನ್ನು ಚಾಸಾ 7 ರವರಿಗೆ ಹಸ್ತಾಂತರಿಸಿದೆನು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿ ಹಾಗೂ ಮು ಮಾ 1 ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲು ಆರೋಪಿ ಪರ ಎಂ ಎಸ್ ಜಿ ವಕೀಲರಿಂದ</u>**

4. ಮಾಹಿತಿ ಬಂದಾಗ ನಾವು ಸಿರುಗುಪ್ಪದ ಆದೋನಿ ರಸ್ತೆಯಲ್ಲಿ ಗಸ್ತು ಮಾಡುತ್ತಿದ್ದೆವು. ಮಾಹಿತಿಯು ಫೋನ್ ಮೂಲಕ ಬಂದಿತ್ತು. ತೆಕ್ಕಲಕೋಟೆಯಿಂದ ಉಪ್ಪಾರ ಹೊಸಳ್ಳಿಗೆ ಮದ್ಯ ಸಾಗಾಣಿಕೆ ಮಾಡುತ್ತಿದ್ದಾರೆ ಎಂದು ಖಚಿತ ಮಾಹಿತಿ ಬಂದಿತ್ತು. ಸಿರುಗುಪ್ಪದ ಆದೋನಿ ರಸ್ತೆಯಿಂದ ತೆಕ್ಕಲಕೋಟೆ 12-15 ಕೀ ಮಿ ಆಗುತ್ತದೆ. ಆ ಸಮಯದಲ್ಲಿ ಸದರಿ ರಸ್ತೆ ಹಾಳಾಗಿತ್ತು ಎಂದರೆ ಸರಿಯಲ್ಲ. ಆದೋನಿ ರಸ್ತೆಯಿಂದ ತೆಕ್ಕಲಕೋಟೆ ಬಸ್ ಸ್ಟಾಂಡ್ ತಲುಪಲು ಅರ್ಧ ಗಂಟೆ ಬೇಕಾಯಿತು. ಪಂಚರನ್ನು ನಾನು ಖುದ್ದಾಗಿ ಕರೆದೆನು. ದೂರಿನಲ್ಲಿ ಆ ಬಗ್ಗೆ ಬರೆಯಿಸಿಲ್ಲ. ತೆಕ್ಕಲಕೋಟೆ ಬಸ್ ಸ್ಟಾಂಡ್ ನಿಂದ ಘಟನಾ ಸ್ಥಳ ಎಷ್ಟು ದೂರ ಇದೆ ಎಂದು ಹೇಳಲು ಆಗುವುದಿಲ್ಲ. ನಾವು ತೆಕ್ಕಲಕೋಟೆ ತಲುಪುವಷ್ಟರಲ್ಲಿ ತೆಕ್ಕಲಕೋಟೆಯಿಂದ ಉಪ್ಪಾರಹೊಸಳ್ಳಿಗೆ ಮಾಹಿತಿ ಬಂದಂತೆ ಮದ್ಯ ಸಾಗಾಣಿಕೆ

ಆಗಿದ್ದಿರಹುದು ಎಂದರೆ ನನಗೆ ಹೇಳಲು ಆಗುವುದಿಲ್ಲ. ತೆಕ್ಕಲಕೋಟೆಯಿಂದ ಉಪ್ಪಾರಹೊಸಳ್ಳಿಗೆ ಹೋಗಲು ಎಷ್ಟು ರಸ್ತೆ ಇದೆ ಎಂದು ಗೊತ್ತಿಲ್ಲ. ಒಬ್ಬ ವ್ಯಕ್ತಿ ದ್ವಿಚಕ್ರ ವಾಹನದಲ್ಲಿ ತೆಕ್ಕಲಕೋಟೆ ಯಿಂದ ಘಟನಾ ಸ್ಥಳಕ್ಕೆ ಹೋಗಲು ಎಷ್ಟು ಸಮಯ ತೆಗೆದುಕೊಳ್ಳಬಹುದು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಘಟನಾ ಸ್ಥಳದಲ್ಲಿ ಸಾಕಷ್ಟು ವಾಹನ ಓಡಾಡುತ್ತವೆ ಎಂದರೆ ಸರಿ. ನಾವು ಬೇರೆ ವಾಹನಗಳನ್ನು ಪರಿಶೀಲನೆ ಮಾಡಲಿಲ್ಲ. ಶೋಧನಾ ಸಮುಚ್ಚಿತ ಆಧಾರವನ್ನು ನಾನೇ ಬರೆದಿದ್ದೆನೆ. ಪಂಚನಾಮೆಯನ್ನು ಪಂಚರನ್ನು ಹೇಳಿ ಬರೆಯಿಸಿದರು. ಪಂಚನಾಮೆಯನ್ನು ನಾನೇ ಬರೆದೆನು. ಆರೋಪಿ ಮದ್ಯವನ್ನು ಎಲ್ಲಿಂದ ತಂದಿದ್ದನು ಎಂದು ನಾನು ವಿಚಾರಣೆ ಮಾಡಲಿಲ್ಲ. ಜಪ್ತದ ಮು ಮಾ ರೀತಿಯ ಮದ್ಯ ಬೇರೆ ಮದ್ಯದ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ನಾವು ಯಾವುದೇ ದಾಳಿ, ಪಂಚನಾಮೆ ಹಾಗೂ ಜಪ್ತ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಮದ್ಯವನ್ನು ಸಾಗಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಕಚೇರಿ ಅಂಕೆ ಸಂಖ್ಯೆಗೋಸ್ಕರ ನಾನು ಸುಳ್ಳು ದೂರು ದಾಖಲು ಮಾಡಿದ್ದೆನು ಎಂದರೆ ಸರಿಯಲ್ಲ. ಮು.ಮಾ ಗೂ ಆರೋಪಿಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**